# ದಿನಾಂಕ 19/4/2007ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ 6ನೇ ಸಭೆಯ ನಡವಳಿಗಳು

**ಸಭೆಗೆ ಹಾಜರಾದವರ ಪಟ್ಟಿಯನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.**

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗು ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರನ್ನು ಸಭೆಯ ಆಧ್ಯಕ್ಷತೆಯನ್ನು ವಹಿಸಿಕೊಂಡ ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಲು ವಿನಂತಿಸಿದರು ಹಾಗು ಹಾಜರಾದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

**ವಿಷಯ 1 : ದಿನಾಂಕ 6/9/2006ರಂದು ಜರುಗಿದ ಮಂಡಳಿಯ ಐದನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಧೃಡೀಕರಿಸುವುದು.**

ದಿನಾಂಕ 6/9/2006ರಂದು ಜರುಗಿದ ಮಂಡಳಿಯ ಐದನೇ ಸಭೆಯ ನಡವಳಿಗಳನ್ನು ಯಾವುದೇ ಬದಲಾವಣೆ ಇಲ್ಲದೆ ದಾಖಲಿಸಲಾಯಿತು.

**ವಿಷಯ 2 : ಮಂಡಳಿಯ ಐದನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.**

1. **ಕರ್ನಾಟಕ ಜೀವವೈವಿಧ್ಯ ನಿಯಮಗಳು 2005ನ್ನು ಕಾನೂನುಬದ್ಧಗೊಳಿಸುವ ಬಗ್ಗೆ:**

ಸದಸ್ಯ ಕಾರ್ಯದರ್ಶಿಯವರು, ಮಂಡಳಿಗೆ ಅಧ್ಯಕ್ಷರನ್ನು ಆಯ್ದೆ ಮಾಡಲು ಕರ್ನಾಟಕ ಸರ್ಕಾರವು ದಿನಾಂಕ 13/3/2007ರಂದು ಅನ್ವೇಷಣಾ ಸಮಿತಿಯನ್ನು ರಚಿಸಿರುವ ಬಗ್ಗೆ ಹಾಗು ಹಿಂದಿನ ಸಭೆಯಲ್ಲಿ ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನೇ ಅಧ್ಯಕ್ಷರನ್ನಾಗಿಸುವ ಕುರಿತು ಕೈಗೊಂಡಿರುವ ನಿರ್ಣಯದ ಬಗ್ಗೆ ಸಭೆಯ ಗಮನಕ್ಕೆ ತಂದರು. ಮಂಡಳಿಯ ಅಭಿವೃದ್ಧಿ ದೃಷ್ಟಿಯಿಂದ ಮಾನ್ಯ ಸಚಿವರು ಅಧ್ಯಕಷರಾದಲ್ಲಿ ಹೆಚ್ಚುವರಿ ವೆಚ್ಚವನ್ನು ಕಡಿಮೆಗೊಳಿಸಬಹುದಲ್ಲದೆ ಮಂಡಳಿಗೆ ಹೆಚ್ಚಿನ ಅನುದಾನ ಮತ್ತು ಹಣಕಾಸಿನ ನೆರವನ್ನು ಒದಗಿಸುವುದಲ್ಲದೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಹೊಂದಬಹುದಾದ್ದರಿಂದ ಮಂಡಳಿಗೆ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸಚಿವರನ್ನೇ ಅಧ್ಯಕ್ಷರನ್ನಾಗಿಸಲು ನಿರ್ಣಯ ಕೈಗೊಳ್ಳಲಾಯಿತು. ಸಭೆ ಜರುಗಿಸಲು ಕೋರಂ 5 ಎಂದಾಗಿರುವುದನ್ನು 3ಕ್ಕೆ (30%) ಕಡಿತಗೊಳಿಸಲು ಸಭೆ ಸರ್ವಾನುಮತದ ನಿರ್ಣಯ ಕೈಗೊಂಡಿತು. ಈ ಬಗ್ಗೆ ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ರಲ್ಲಿ ತಿದ್ದುಪಡಿಗಾಗಿ ಸರ್ಕಾರಕ್ಕೆ ಪತ್ರ ಬರಯುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಿತು.

2. **ಪ್ರಾಣಿಶಾಸ್ತ್ರ ವಿಷಯದ ರೀಡರ್/ಸಹಪ್ರದ್ಯಾಪಕರ ಹುದ್ದೆಗಳನ್ನು ನಿಯೋಜನೆ ಮೇಲೆ ಭರ್ತಿಗೊಳಿಸುವ ಬಗ್ಗೆ.**

ಮಂಡಳಿಯಲ್ಲಿ ಖಾಲಿಯಿರುವ ಪ್ರಾಣಶಾಸ್ತ್ರ ವಿಷಯದ ರೀಡರ್/ಸಹಪ್ರಾಧ್ಯಾಪಕರ ಹುದ್ದೆಯನ್ನು ನಿಯೋಜನೆ ಮೇರೆಗೆ ಭರ್ತಿ ಮಾಡಿಕೊಳ್ಳಲು ರಾಜ್ಯ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಹಾಗೂ ಕಾರ್ಯನಿರ್ವಹಣಾಧಿಕಾರಿ ತೋಟಗಾರಿಕೆ ಹುದ್ದೆಗೆ ಜಂಟಿ ನಿರ್ದೇಶಕರನ್ನು ನಿಯೋಜನೆ ಮಾಡುವಂತೆ ತೋಟಗಾರಿಕಾ ಇಲಾಖೆಗೆ ಪತ್ರಗಳನ್ನು ಬರೆದಿರುವ ಸದಸ್ಯ ಕಾರ್ಯದರ್ಶಿಯವರ ಕ್ರಮವನ್ನು ಸಭೆಯು ಧೃಡೀಕರಿಸಿತು.

3. **ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚನ್ನೈ ಹಾಗೂ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ.**

ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚನ್ನೈ ಹಾಗೂ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಬಗ್ಗೆ ಸಭೆಯು ಪರಿಶೀಲಿಸಿತು. ಈ ಬಗ್ಗೆ ಸಂಬಂಧಿಸಿದ ಸಂಸ್ಥೆಗಳನ್ನು ಸಂಪರ್ಕಿಸಿ ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಸೂಚಿಸಿತು.

**4. ಶ್ರೀ ಗಂಗಾಧರ ವಿ ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ.**

ಸರ್ಕಾರದ ಆದೇಶವನ್ನು ಸಭೆಯು ಗಮನಿಸಿತು ಆದರೆ ಶ್ರೀ ಗಂಗಾಧರ ವಿ ಮಡ್ಡಿಕೇರಿ, ಇವರು ಈಗಾಗಲೇ ಮಂಡಳಿಯಲ್ಲಿ ಸುಮಾರು ನಾಲ್ಕು ವರ್ಷ ಪೂರೈಸಿರುವುದರಿಂದ ಇವರ ಸೇವೆಯನ್ನು ತಕ್ಷಣ ಮಾತೃ ಇಲಾಖೆಗೆ ಹಿಂದುರಿಗಿಸಲು ತಿಳಿಸಲಾಯಿತು. ತದನಂತರ ಮೀನುಗಾರಿಕೆ ಇಲಾಖೆಗೆ ಮತ್ತೊಬ್ಬ ಜಂಟಿ ನಿರ್ದೇಶಕರನ್ನು ನಿಯೋಜನೆ ಮಾಡಲು ಕ್ರಮಕೈಗೊಳ್ಳುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

**5. ಮಂಡಳಿಯು ಸದಸ್ಯ ಕಾರ್ಯದರ್ಶಿಯವರಿಗೆ ಕಾರನ್ನು ಖರೀದಿಸುವ ಬಗ್ಗೆ**

ಮಂಡಳಿಯು ಸದಸ್ಯ ಕಾರ್ಯದರ್ಶಿಯವರಿಗೆ ಮಾರುತಿ ಎಸ್ಟೀಂ ಕಾರನ್ನು ಖರೀದಿಸಿರುವುದನ್ನು ಸಭೆಯು ಗಮನಿಸಿತು.

**6. ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ.**

ಸಭೆಯು ಸರ್ಕಾರದ ಆದೇಶವನ್ನು ಗಮನಿಸಿತು ಮತ್ತು ನಲ್ಲೂರು ಗ್ರಾಮದ ಹುಣಸೇತೋಪನ್ನು ಸಂರಕ್ಷಿಸಲು ಸೂಕ್ತ ಪ್ರಸ್ತಾವನೆ ತಯಾರಿಸಲು ಸೂಚಿಸಿತು.

**ವಿಷಯ: 3: ಕುವೆಂಪು ಸ್ಮಾರಕ ಜೈವಿಕ ಕೆಲಸಕಾರ್ಯಗಳ ಪ್ರಗತಿ ವರದಿ**

ಸದಸ್ಯ ಕಾರ್ಯದರ್ಶಿಯವರು ಸದರಿ ಯೋಜನೆಯಡಿ ಕೈಗೊಂಡ ಕಾರ್ಯಕ್ರಮಗಳನ್ನು ಹಾಗು ಇದುವರೆಗೆ ತಗಲಿರುವ ವೆಚ್ಚದ ವಿವರಗಳನ್ನು ನೀಡಿದರು. ಕುವೆಂಪು ಸಂದೇಶವನ ಅಭಿವೃದ್ಧಿ ಸಂಬಂಧಿ 2006-07ನೇ ಸಾಲಿನಲ್ಲಿ ರೂ 19.74 ಲಕ್ಷ ಹಾಗೂ 2007-08ನೇ ಸಾಲಿನಲ್ಲಿ ರೂ 16.07 ಲಕ್ಷ ಹೀಗೆ ರೂ 36.44 ಲಕ್ಷದ ಯೋಜನೆ ಹಿಂದಿನ ಸದಸ್ಯ ಕಾರ್ಯದರ್ಶಿಯವರು ಮಂಜೂರಾತಿ ನೀಡಿರುವುದನ್ನು ತಿಳಿಸಿದರು. ಹಿಂದಿನ ಸದಸ್ಯ ಕಾರ್ಯದರ್ಶಿಗಳು ಮಂಡಳಿ ಅನುಮತಿ ಮೇರೆಗೆ ಮಂಜೂರಾತಿ ನೀಡಿದ ಕಾರ್ಯಕ್ರಮಗಳನ್ನು ಸಭೆಯು ಅನುಮೋದಿಸಿತು. ಸ್ಥಿರ ಠೇವಣಿ ಖಾತೆಯಿಂದ ಗಳಿಸಿದ ಬಡ್ಡಿ ಹಣ ರೂ 9.47 ಲಕ್ಷಗಳನ್ನು ಶಿವಮೊಗ್ಗ ಜಿಲ್ಲೆಯಲ್ಲಿರುವ ಕುವೆಂಪು ಸ್ಮಾರಕ ಜೈವಿಕ 'ವನದ ಚಟುವಟಿಕೆಗಳಿಗೆ ವಿನಿಯೋಗಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.

ಈ ಚಟುವಟಿಕೆಗಳಿಗೆ ನೀಡಲಾದ ರೂ 36.44 ಲಕ್ಷಗಳನ್ನು ಕೂಡಲೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರಿಗೆ ಕಳುಹಿಸಲು ಸದಸ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಯಿತು.

**ವಿಷಯ 4 : ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆ**

ಸದಸ್ಯ ಕಾರ್ಯದರ್ಶಿಯವರ ಸೂಚನೆ ಮೇರೆಗೆ ಶ್ರೀ ಗಂಗಾಧರ ವಿ ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರು ಯೋಜನೆಯ ಪ್ರಗತಿಯನ್ನು ವಿವರಿಸುತ್ತಾ ಎಲ್ಲಾ ಘಟಕಗಳ ಸಮೀಕ್ಷೆ ಕಾರ್ಯವು ಸಂಪೂರ್ಣಗೊಂಡಿದ್ದು ದತ್ತಾಂಶದ ವಿವರಗಳನ್ನು ಇಸ್ರೋ ಸಂಸ್ಥೆಗೆ ಸಲ್ಲಿಸಲಾಗಿದ್ದು ಕರ್ನಾಟಕ ಕರಾವಳಿ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣೆ ತಂತ್ರಜಾಲ ರೂಪಿಸಲಾಗುತ್ತಿದೆಯೆಂದು ಅಲ್ಲದೆ ಪ್ರತಿಯೊಂದು ಅನುಷ್ಠಾನ ಸಂಸ್ಥೆಯಿಂದ ಸವಿವರವಾಗಿ ವರದಿಗಳು ತಯಾರಿ ಹಂತದಲ್ಲಿವೆಯೆಂದು ತಿಳಿಸಿದರು. ಆದರೆ 20 ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಕೈಗೊಂಡಿರುವ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿ ಕೆಲಸ ಮಾತ್ರ ಬಾಕಿ ಉಳಿದಿದ್ದು ಸಮೀಕ್ಷೆ ಮುಗಿಸಿ ದಾಖಲಾತಿಗಳನ್ನು ಹೊರತರಲು ಇನ್ನೂ ಕೆಲವು ತಿಂಗಳುಗಳು ಸಮಯಾವಕಾಶ ಪಡೆಯಲು ನಿರ್ಣಯಿಸಿತು ಹಾಗು ಈ ಬಗ್ಗೆ ಕೆಯುಐಡಿಎಫ್‌ಸಿಗೆ ಪತ್ರ ಬರೆಯುವಂತೆ ಸೂಚಿಸಿತು. ಕೆಯುಐಡಿಎಫ್‌ಸಿಯವರು ದಿನಾಂಕ 2/4/2007ರ ಪತ್ರದಲ್ಲಿ ಪರಿಷ್ಕರಿಸಿದ ನಿಬಂಧನೆಗಳಿಗೆ ಸಭೆಯು ಒಪ್ಪಿಗೆ ಸೂಚಿಸಲು ಮತ್ತು ಮುಂದಿನ ಸಭೆಗೆ ವ್ಯವಸ್ಥಾಪಕ ನಿರ್ದೇಶಕರನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯಲು ಸಭೆ ನಿರ್ಣಯಿಸಿತು.

**ವಿಷಯ 5: ವಿಶೇಷ ಆಹ್ವಾನಿತರನ್ನು ಮಂಡಳಿಯ ಸಭೆಗೆ ಆಹ್ವಾನಿಸುವ ಬಗ್ಗೆ**

ಸದಸ್ಯ ಕಾರ್ಯದರ್ಶಿಯವರು ಪ್ರಸ್ತಾಪಿಸದಂತೆ ಈ ಕೆಳಗೆ ಹೆಸರಿಸಿದ ವಿವಿದ ಇಲಾಖೆಗಳ ಮುಖ್ಯಸ್ಥರನ್ನು ಮಂಡಳಿಯ ಸಭೆಗಳಿಗೆ ವಿಶೇಷ ಆಹ್ವಾನಿತರನ್ನಾಗಿ ಆಮಂತ್ರಿಸಲು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತು.

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ___________ಅರಣ್ಯ ಇಲಾಖೆ
2. ಮೀನುಗಾರಿಕೆ ನಿರ್ದೇಶಕರು________________ಮೀನುಗಾರಿಕಾ ಇಲಾಖೆ
3. ತೋಟಗಾರಿಕೆ ನಿರ್ದೇಶಕರು________________ತೋಟಗಾರಿಗೆ ಇಲಾಖೆ
4. ಇನ್ನಿತರೆ ಸಂಭಂಧಿಸಿದ ಇಲಾಖಾ ಮುಖ್ಯಸ್ಥರು

**ವಿಷಯ 6: ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ**

ರಾಜ್ಯದಲ್ಲಿಯ ವಿವಿಧ ಜೈವಿಕ ಸಂಪನ್ಮೂಲಗಳನ್ನು ಬಳಸುತ್ತಿರುವ ಔಷಧೀಯ ಕಂಪೆನಿಯಿಂದ ವಾರ್ಷಿಕ ವಹಿವಾಟಿನ ಮೇಲೆ ಪ್ರತಿಶತ ಒಂದು ಅಥವಾ ಎರಡರಷ್ಟನ್ನು ಜೀವವೈವಿಧ್ಯ ಸೆಸ್ ಎಂದು ವಸೂಲಿಕರಿಸುವ ಬಗ್ಗೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿರುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ರಾಜ್ಯದಲ್ಲಿಯ ಜೈವಿಕ ಸಂಪನ್ಮೂಲಳನ್ನು ಉಪಯೋಗಿಸಿ ಔಷಧ ಮತ್ತು ಸೌಂದರ್ಯವಧಕ ವಸ್ತುಗಳನ್ನು ತಯಾರಿಸುವ ಕಂಪೆನಿಗಳಿಗೆ ಯಾವ ಯಾವ ಸಂಪನ್ಮೂಲಗಳನ್ನು ಪ್ರಮಾಣದಲ್ಲಿ ಮತ್ತು ಯಾವುದಕ್ಕೆ ಉಪಯೋಗಿಸಲಾಗುತ್ತಿದೆ ಎಂಬುದರ ವಿವರಗಳನ್ನು ನೀಡುವಂತೆ ಪತ್ರಗಳನ್ನು ಬರೆದಿರುವುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು. ರಾಜ್ಯಕ್ಕೆ ಜೈವಿಕ ಸಂಪನ್ಮೂಲಗಳನ್ನು ಉಪಯೋಗಿಸುವ ಎಲ್ಲಾ ವ್ಯಕ್ತಿ ಮತ್ತು ಸಂಸ್ಥೆ ಜೀವವೈವಿಧ್ಯ ಕಾಯ್ದೆ 2002ರ ಪ್ರಕಾರ ಮಂದಳಿಯ ಪೂರ್ವಾನುಮತಿ

**ವಿಷಯ: 7 ರಾಜ್ಯದ ಜೀವವೈವಿಧ್ಯ ಬಗ್ಗೆ ಅಧ್ಯಯನ, ಸಂಶೋಧನೆ ಸಮೀಕ್ಷೆ ದಾಖಲೀಕರಣ ಮತ್ತು ಸಂರಕ್ಷಣೆಗಾಗಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ.**

ಅ) ಕರ್ನಾಟಕ ಸರ್ಕಾರವು 2006-07ನೇ ಸಾಲಿನಲ್ಲಿ ಪ್ರಥಮ ಬಾರಿಗೆ ಯೋಜನೆಗಳಿಗಾಗಿಯೇ ಬಿಡುಗಡೆ ಮಾಡಲಾದ ರೂ 10.00 ಲಕ್ಷ ಅನುದಾನದಲ್ಲಿ 6 ಜಿಲ್ಲೆಗಳಲ್ಲಿ ಮತ್ತು ಉಳಿಕೆ ಅನುದಾನದಿಂದ ನೀಡಲಾದ ಹೆಚ್ಚುವರಿ ರೂ 7.39 ಲಕ್ಷ ಅನುದಾನದಲ್ಲಿ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸುವ ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಆಯ್ದ 5 ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿ ಕಾರ್ಯವನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ಹಮ್ಮಿಕೊಳ್ಳಲು ಸದಸ್ಯ ಕಾರ್ಯದರ್ಶಿಯವರು ಕೈಗೊಂಡ ಕ್ರಮವನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.

ಬ) ಮಂಡಳಿಯ ಜೀವವೈವಿಧ್ಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಕೈಗೊಳ್ಳಬೇಕಾದ ಕೆಲಸಕಾರ್ಯಗಳ ಕುರಿತು ರೂ.5.00 ಕೋಟಿ ವೆಚ್ಚದ ಯೋಜನಾ ಪ್ರಸ್ತಾವನೆಯನ್ನು ಕಾರ್ಯಕ್ರಮಗಳು ಅತೀ ಅವಶ್ಯಕವಾಗಿರುವುದರಿಂದ ರೂ 5.00 ಕೋಟಿ ಯೋಜನೆಗೆ ಮಂಜೂರಾತಿ ನೀಡಲು ಸಭೆಯ ಸರ್ವಾನುಮತದ ನಿರ್ಣಯ ಕೈಗೊಂಡಿತು. ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆಯೂ ಮತ್ತು ಹೆಚ್ಚುವರಿ ಅನುದಾನಕ್ಕಾಗಿ ಪೂರಕ ಆಯವ್ಯಯದಡಿ ನೀಡುವಂಥೆ ಸರ್ಕಾರವನ್ನು ಕೋರಲು ಸಭೆಯು ತೀರ್ಮಾನಿಸಿತು.

ಮಂಡಳಿಯ ಚಟುವಟಿಕೆಗಳಿಗಾಗಿ, ಜಿಲ್ಲಾಪಂಚಾಯತುಗಳು, ಅರಣ್ಯ ಇಲಾಖೆಯ ಜೆಬಿಐಸಿ ಯೋಜನೆ, ಜಲಾನಯನ ಯೋಜನೆ, ರೋಜಗಾರ್ ಯೋಜನೆ, ಬರಪರಿಹಾರ ಯೋಜನೆ ಕೂಲಿಗಾಗಿ ಕಾಳು ಯೋಜನೆ, ಸಂಸದರು ಮತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ, ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕೆಯುಐಡಿಎಫ್‌ಸಿ ಮುಂತಾದ ಸಂಸ್ಥೆಗಳೊಡನೆ ಚರ್ಚಿಸಿ ಅನುದಾನ ಪಡೆಯುವ ಬಗ್ಗೆ ಪ್ರಯತ್ನಸುವ ಕುರಿತು ನಿರ್ಣಯಕೈಗೊಂಡಿತು.

**ವಿಷಯ ೮: ಮೀನುಗಳ ಅಧ್ಯಯನ ಮತ್ತು ಸಂರಕ್ಷಣೆಯ ಯೋಜನಾ ಪ್ರಸ್ತಾವನೆಗಳು:**

1. **ನಿಷೇಧಿಸಲಾದ ಆಫ್ರಿಕಾದ ಆಣೆಮೀನಿನ ಸ್ಥಿತಿಗತಿ ಹಾಗೂ ಇದರಿಂದ ಸ್ಥಳೀಯ ಮೀನುಗಳ ನಾಶವಾಗುತ್ತಿರುವ ಕುರಿತು ಅಧ್ಯಯನ ಕೈಗೊಳ್ಳುವ ಬಗ್ಗೆ. ಸೊಸೈಟಿ ಫಾರ್ ಅಡ್ವಾನ್ಸ್‌ಮೆಂಟ್ ಆಫ ಅಕ್ವಾಕಲ್ಚರ್,** ಬೆಂಗಳೂರು ಇವರು ನಿಷೇಧಿಸಲಾದ ಆಫ್ರಿಕಾದ ಆಣೆಮೀನಿನ ಸ್ಥಿತಿಗತಿ ಮತ್ತು ಇದರಿಂದ ಸ್ಥಳೀಯ ಮೀನುಗಳು ನಾಶವಾಗುತ್ತಿರುವ ಕುರಿತು ಸಲ್ಲಿಸಿರುವ ಅಧ್ಯಯನದ ಬಗ್ಗೆ ಸಭೆಯಲ್ಲಿ ಚರ್ಚಿಸಿ ರೂ ೨.೮೦ ಲಕ್ಷಗಳ ಯೋಜನೆಯನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ (ಎನ್‌ಬಿಎ) ಕಳುಹಿಸಲು ಸೂಚಿಸಲಾಯಿತು.

೨. **ಪಶ್ಚಿಮಘಟ್ಟಗಳ ತುಂಗಾ ನದಿಯಲ್ಲಿ ಮತ್ಸ್ಯವೈವಿಧ್ಯ ಅಧ್ಯಯನ ಕೈಗೊಳ್ಳುವ ಬಗ್ಗೆ**

ಪಶ್ಚಿಮಘಟ್ಟಗಳ ತುಂಗಾ ನದಿಯಲ್ಲಿ ಮತ್ಸ್ಯವೈವಿಧ್ಯ ಅಧ್ಯಯನ ಯೋಜನೆ ಬಗ್ಗೆ ಸಭೆಯು ವಿವರವಾಗಿ ಚರ್ಚಿಸಿ ಇಂತಹ ಅಧ್ಯಯನ ಅವಶ್ಯಕವಾಗಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗಕ್ಕೆ ನೀಡಲುದ್ದೇಶಿಸಿರುವ ರೂ ೨.೨೫ಲಕ್ಷ ಯೋಜನೆಯನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ಕಳುಹಿಸಲು ಸೂಚಿಸಲಾಯಿತು.

೩. **ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರ ಮತ್ಸ್ಯಧಾಮದ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳ ಯೋಜನೆಗೆ ಮಂಜೂರಾತಿ ನೀಡುವ ಬಗ್ಗೆ.**

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆಪಸಂಮಿ/266/ಮೀಇಇ/2005 ದಿನಾಂಕ 1/4/2006ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರದ ಶ್ರೀ ನೀಲಕಂಠೇಶ್ವರ ದೇವಸ್ಥಾನ ಮತ್ತು ಶ್ರೀ ಮಠದ ಬಳಿಯ ತುಂಗಾನದಿಯ ಪ್ರದೇಶವನ್ನು ಮತ್ಸ್ಯಧಾಮವೆಂದು ಘೋಷಿಸಿರುವ ಬಗ್ಗೆ ಮತ್ತು ಈ ಪ್ರದೇಶದಲ್ಲಿ ಮಹಶೀರ್, ಹರಗಿ ಮುಂತಾದ ಸ್ಥಳೀಯ ಮೀನುಗಳು ನೆಲೆಗೊಂಡಿದ್ದು ಅವುಗಳನ್ನು ರಕ್ಷಿಸಲು ಮತ್ತು ಈ ಮತ್ಸ್ಯಧಾಮವನ್ನು ಅಭಿವೃದ್ಧಿಪಡಿಸಿ ಪ್ರೇಕ್ಷಕರಿಗೆ ಪ್ರವಾಸಿ ತಾಣವಾಗಿ ಮಾರ್ಪಡಿಸಲು ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು ಇವರು ರೂ.5.00 ಲಕ್ಷ ವೆಚ್ಚದ ಯೋಜನೆಯನ್ನು ಕಳುಹಿಸಿರುವ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ತಿಳಿಸಿದಾಗ ಸಭೆಯು ಚರ್ಚಿಸಿ ಇಂತಹ ಮತ್ಸ್ಯಧಾಮಗಳನ್ನು ಅಭಿವೃದ್ಧಿ ಪಡಿಸುವುದು ಅಗತ್ಯವೆಂದು ಮನಗಂಡು ಮಂಡಳಿಯು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಸೂಚಿಸಲಾಯಿತು.

ವಿಷಯ ೯: ಉತ್ತರ ಕನ್ನಡ ಜಿಲ್ಲೆಯ ಜನಾಂಗ ತಳಿ ವೈವಿಧ್ಯ ಭೂ ಸಂತತಿ ಸಂರಕ್ಷಣೆಯ ಸಾಂಪ್ರದಾಯಿಕ ಜ್ಞಾನದ ಜೀವವೈವಿಧ್ಯ ಮಾಹಿತಿಯ ದತ್ತಾಂಶ ತಯಾರಿ-ಕಿರು ಸಂಶೋಧನಾ ಯೋಜನೆ.

ಉತ್ತರ ಕನ್ನಡ ಜಿಲ್ಲೆಯ ಜನಾಂಗ ತಳಿ ವೈವಿಧ್ಯ, ಭೂ ಸಂತತಿ ಸಂರಕ್ಷಣೆಯ ಸಾಂಪ್ರದಾಯಿಕ ಜ್ಞಾನದ ಜೀವವೈವಿಧ್ಯ ಮಹಿತಿಯ ದತ್ತಾಂಶ ತಯಾರಿ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಅಥವಾ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳಿಗೆ ಪ್ರಸ್ತಾವನೆಯನ್ನು ಕಳುಹಿಸಲು ಸೂಚಿಸಲಾಯಿತು.

**ವಿಷಯ 10: ಜೀವವೈವಿಧ್ಯಕ್ಕೆ ಸಂಬಂಧಿಸಿದಂತೆ ಮಂಡಳಿಯಿಂದ 7 ಯೋಜನೆಗಳನ್ನು ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸಿರುವುದನ್ನು ಅನುಮೋದಿಸುವ ಬಗ್ಗೆ:**

ಮಂಡಳಿಯಿಂದ ಯೋಜನೆಗಳನ್ನು ತಯಾರಿಸಿ 6ನ್ನು ವಿಶ್ವಬ್ಯಾಂಕಿಗೂ ಹಾಗೂ ಒಂದು ಯೋಜನೆಯನ್ನು ಭಾರದ ಸರ್ಕಾರಕ್ಕೆ ಸಲ್ಲಿಸಿರುವ ಸದಸ್ಯ ಕಾರ್ಯದರ್ಶಿಯವರ ಕ್ರಮಕ್ಕೆ ಸಭೆಯು ದೃಢೀಕರಿಸುತ್ತ ಈ ಯೋಜನೆಗಳ ಮಂಜೂರಾತಿಗಾಗಿ ಪ್ರಯತ್ನಿಸುವಂತೆ ಸೂಚಿಸಿತು.

**ವಿಷಯ 11: 2007-08ನೇ ಸಾಲಿನ ಮಂಡಳಿಯ ಆಯವ್ಯಯ ಅನುಮೋದಿಸುವ ಬಗ್ಗೆ**

ಮಂಡಳಿಯು 2007-08ನೇ ಸಾಲಿಗೆ ತಯಾರಿಸುವ ರೂ.96.58 ಲಕ್ಷದ ಕಾರ್ಯಯೋಜನೆಗೆ ಮಂಜೂರಾತಿ ನೀಡಲು ಸಭೆಯು ಸರ್ವಾನುಪಾತದಿಂದ ನಿರ್ಣಯಿಸಿತು. ಈ ಬಗ್ಗೆ ಹೆಚ್ಚುವರಿ ಅನುದಾನ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

**ವಿಷಯ 12: ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಲೆಕ್ಕ ಪರಿಶೋಧಕರ ಹುದ್ದೆಯನ್ನು ಸೃಷ್ಟಿಸಿ ನಿಯೋಜನೆ ಮೇರೆಗೆ ಪಡೆಯುವ ಬಗ್ಗೆ:**

ಈ ಬಗ್ಗೆ ಸಭೆಯು ಚರ್ಚಿಸಿ ಮಂಡಳಿಯಲ್ಲಿ ಲೆಕ್ಕ ಮೇಲ್ವಿಚಾರಕ ಹುದ್ದೆಗೆ ಪರಿಣತಿ ಹೊಂದಿದವರನ್ನೇ ಆಯ್ಕೆ ಮಾಡಿಕೊಂಡಲ್ಲಿ ಕೆಲಸಕಾರ್ಯಗಳು ಸುಗಮವಾಗಿರುವುದರಿಂದ ಲೆಕ್ಕ ಪರಿಶೋಧಕರ ಇನ್ನೊಂದು ಹುದ್ದೆಯನ್ನು ಸೃಷ್ಟಿಸುವ ಅಗತ್ಯವಿಲ್ಲವೆಂದು ನಿರ್ಣಯಿಸಿತು. ಜೀವವೈವಿಧ್ಯ ಕಾಯ್ದೆ ಮತ್ತು ನಿಯಮಗಳಲ್ಲಿ ಮಹಾಲೇಖಪಾಲಕರು ಮಂಡಳಿಯ ಲೆಕ್ಕ ಪರಿಶೋಧನೆ ಕಾರ್ಯಕೈಗೊಳ್ಳಬೇಕಿರುವುದರಿಂದ ಈ ವಿಷಯವನ್ನು ಕೈಬಿಡಲಾಯಿತು.

**ವಿಷಯ 13. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರ್ಥಿಕ ವಾರ್ಷಿಕ ವರದಿಗಳ ಒಪ್ಪಿಗೆ ಹಾಗೂ ಸದಸ್ಯ ಕಾರ್ಯದರ್ಶಿಗಳಿಗೆ ಆಡಳಿತಾತ್ಮಕ ಅಧಿಕಾರ ನೀಡುವ ಬಗ್ಗೆ**

ಮಹಾಲೇಖಪಾಲರು ಮಂಡಳಿಯ ಲೆಕ್ಕಪತ್ರಗಳನ್ನು ಪರಿಶೋಧನೆ ಕೈಗೊಂಡು ತಯಾರಿಸಲಾದ 2003-04, 2004-05 ಮತ್ತು 2005-06ರ ಲೆಕ್ಕಪತ್ರಗಳಿಗೆ ಸಭೆಯು ಒಪ್ಪಿಗೆ ಮತ್ತು ಮುಂದಿನ ಕ್ರಮಕೈಗೊಳ್ಳಲು ಅನುಮತಿ ನೀಡಿತು.

ವಿಷಯ 14: ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಛೇರಿ ಕೆಲಸ ಕಾರ್ಯಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಬಗ್ಗೆ

ಮಂಡಳಿಯ ಕೆಲಸ ಕಾರ್ಯಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಕುರಿತು ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದರೂ ಟೆಂಡರ್ ಬುಲೆಟಿನ್ ಮತ್ತು ವೃತ್ತ ಪತ್ರಿಕೆಗಳಲ್ಲಿ ಸೂಕ್ತ ಪ್ರಚಾರ ನೀಡದಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಪಕ್ರಿಯೆ ಪ್ರಕಾರ ವಾಹನ ಸರಬರಾಜು ಮಾಡುವಂತೆ ಅತೀ ಕಡಿಮೆ ದರ ಸೂಚಿಸಿದ ಏಜೆನ್ಸಿಗೆ ಪತ್ರ ಬರೆಯಲಾಗಿ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅವರು ವಾಹನ ಸರಬರಾಜು ಮಾಡಲು ವಿಫಲರಾದ್ದರಿಂದ ಎರಡನೇ ಅತೀ ಕಡಿಮೆ ಬೆಲೆ ನಮೂದಿಸಿದ ಮೆ॥ ಲೀಲಾ ಟ್ರಾವಲ್ಸ್, ಬೆಂಗಳೂರು ಇವರನ್ನು ಕರೆಸಿ ಸಂಧಾನದ ಮೂಲಕ ಅತೀ ಕಡಿಮೆ ದರ ಸೂಚಿಸಿದ ಮೊದಲನೇ ಟೆಂಡರ್‌ದಾರನು ಸೂಚಿಸಿದ ದರದಲ್ಲಿಯೇ ವಾಹನ ಸರಬರಾಜು ಮಾಡಲು ಒಪ್ಪಿಕೊಂಡ ಮೇರೆಗೆ (ಇಲ್ಲವಾದಲ್ಲಿ ಮಂಡಳಿಗೆ ಉಂಟಾಗುವ ನಷ್ಟವನ್ನು ವಸೂಲಿಕರಿಸಲು ಸದರಿ ಏಜೆನ್ಸಿಯವರೊಂದಿಗೆ ಕರಾರು ಮಾಡಿಕೊಳ್ಳದಿದ್ದುದರಿಂದ ಕಷ್ಟವಾಗುತ್ತಿದ್ದರಿಂದ) ವಾಹನವನ್ನು ಪಡೆಯಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು. ಈ ವಿಷಯದಲ್ಲಿ ಹೊಸ ಟೆಂಡರ್ ಕರೆದು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿ, ಈ ಪ್ರಸ್ತಾವನೆಯನ್ನು ಸಭೆಯು ತಿರಸ್ಕರಿಸಿತು.

ವಿಷಯ 15: ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಲು ಅನ್ವೇಷಣಾ ಸಮಿತಿ (Search Committee) ಯನ್ನು ರಚಿಸುವ ಬಗ್ಗೆ

ಈ ವಿಚಾರವನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಈಗಾಗಲೇ ವಿಷಯ 2(1)ರಲ್ಲಿ ಅನ್ವೇಷನಾ ಸಮಿತಿಯನ್ನು ರದ್ದುಗೊಳಿಸುವ ಬಗ್ಗೆ ಮತ್ತು ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನೇ ಅಧ್ಯಕ್ಷರನ್ನಾಗಿಸುವ ಕುರಿತು ಕರ್ನಾಟಕ ಜೀವವೈವಿಧ್ಯ ನಿಯಮಗಳು 2005ರಲ್ಲಿ ತಿದ್ದುಪಡಿಗಾಗಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸದಸ್ಯ ಕಾರ್ಯದರ್ಶಿಯವರಿಗೆ ನಿರ್ದೇಶಿಸಿತು.

**ವಿಷಯ 16: ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಯವರ ವಾಸ್ತವ್ಯಕ್ಕೆ ಸೂಕ್ತ ವಸತಿ ಗೃಹ ದೊರೆಯದಿರುವುದರಿಂದ ಮಂಡಳಿಯಿಂದಲೇ ಒಂದು ಮನೆಯನ್ನು ಬಾಡಿಗೆಗೆ ಪಡೆದು ಪೂರೈಸಲು ಮತ್ತು ಅವರಿಗೆ ದೊರಿಯುವ ಮನೆ ಬಾಡಿಗೆ ಭತ್ಯೆಯನ್ನು ನಿಯಮಾನುಸಾರ ಜಮಾ ಮಾಡಿಕೊಳ್ಳುವ ಬಗ್ಗೆ ಸಭೆಯು ನಿಯಮಾನುಸಾರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಿತು.

**ವಿಷಯ 17: ಅಧ್ಯಕ್ಷರ ಅನುಮತಿ ಮೇರೆಗೆ ಇನ್ನಿತರ ವಿಷಯಗಳು:**

ಸದಸ್ಯ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಇವರು ರಾಜ್ಯದಲ್ಲಿ ಜೀವವೈವಿಧ್ಯಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಮಟ್ಟದ ಮತ್ತು ದೇಶದಲ್ಲಿಯೇ ವಿಶಿಷ್ಟವಾದಂತಹ ಒಂದು ಸಂಗ್ರಹಾಲಯ (Museum) ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿದಾಗ ಇಂತಹ ಒಂದು ಸಂಗ್ರಹಾಲಯದ ಅವಶ್ಯಕತೆ ತುಂಬಾ ಇದೆಯೆಂದು ಮತ್ತು ಜನರಿಗೆ ಜೀವವೈವಿಧ್ಯ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಲು ಮತ್ತು ಮನದಟ್ಟು ಮಾಡಲು ತುಂಬಾ ಸಹಕಾರಿಯಾಗುವುದರಿಂದ ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ/ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವಿಗಾಗಿ ಕಳುಹಿಸಲು ಸಂಪೂರ್ಣ ಅನುಮತಿಯನ್ನು ನೀಡಿತು.

ಸಭೆಯಲ್ಲಿ ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಹಿಂದಿನ ಸದಸ್ಯ ಕಾರ್ಯದರ್ಶಿಗಳಾದ ಶ್ರೀ.ಎನ್.ಡಿ.ತಿವಾರಿ, ರವರು ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಮಂಡಳಿಯ ಕಾರ್ಯಚಟುವಟಿಕೆಗಳ ಕಛೇರಿಯ ಆಧುನೀಕರಣ, ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಹಾಗೂ ರಾಷ್ಟ್ರಮಟ್ಟದ ವಿಚಾರ ಸಂಕೀರ್ಣ ನಡೆಸುವಲ್ಲಿ ಶ್ರೀಯುತರ ಕಾರ್ಯತತ್ಪರತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಮುಕ್ತಾಯವಾದವು.

**ಅನುಬಂಧ – 1**

ದಿನಾಂಕ: 19-04-2007ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರನೇ ಸಭೆಗೆ ಹಾಜರಾದವರ ಪಟ್ಟಿ

1. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿಯ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪ್ರತಿನಿಧಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು.

ವಿಶೇಷ ಆಹ್ವಾನಿತರು

1. ಸರ್ಕಾರದ ಕಾರ್ಯದರ್ಶಿ (ಅರಣ್ಯ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.